# ಓಮನ್  ಸುಲ್ತಾನ್‌ರಿಂದ ಅಭಿನಂದನಾ ಕರೆ ಸ್ವೀಕರಿಸಿದ ಪ್ರಧಾನಿ

ಜೂನ್ 11, 2024

ಪ್ರಧಾನಿ ಶ್ರೀ ನರೇಂದ್ರ ಮೋದಿಯವರಿಗೆ ಓಮನ್‌ನ ಸುಲ್ತಾನರಾದ ಘನತೆವೆತ್ತ ಹೈತಮ್ ಬಿನ್ ತರೀಕ್ ಅವರು ಇಂದು ದೂರವಾಣಿ ಕರೆ ಮಾಡಿ ಅಭಿನಂದನೆ ಸಲ್ಲಿಸಿದ್ದಾರೆ.

ಇತ್ತೀಚೆಗೆ ಮುಕ್ತಾಯಗೊಂಡ ಸಾರ್ವತ್ರಿಕ ಚುನಾವಣೆಯಲ್ಲಿ ಯಶಸ್ಸು ಸಾಧಿಸಿ ಮೂರನೇ ಅವಧಿಗೆ ಪ್ರಧಾನಿಯಾಗಿ ಮರುನೇಮಕಗೊಂಡ ನಿಮಿತ್ತ ಮೋದಿ ಅವರಿಗೆ ಸುಲ್ತಾನ್ ಹೈತಮ್ ಬಿನ್ ತರೀಕ್ ಅವರು ತಮ್ಮ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು.

ಓಮನ್ ಹಾಗೂ ಭಾರತದ ನಡುವೆ ನೂರಾರು ವರ್ಷಗಳಿಂದ ಇರುವ ಸ್ನೇಹ ಸಂಬಂಧದ ಬಗ್ಗೆ ಪ್ರಸ್ತಾಪಿಸಿದ ಅವರು ಭಾರತದ ಪ್ರಜೆಗಳ ಅಭಿವೃದ್ಧಿ ಹಾಗೂ ಸಮೃದ್ಧಿಗಾಗಿ ಶುಭ ಹಾರೈಕೆಗಳನ್ನು ತಿಳಿಸಿದರು.

ಘನತೆವೆತ್ತ ಸುಲ್ತಾನ್‌ರವರ ಆತ್ಮೀಯ ಶುಭಾಶಯಗಳಿಗೆ ಧನ್ಯವಾದ ತಿಳಿಸಿದ ಶ್ರೀ ಪ್ರಧಾನ ಮಂತ್ರಿಯವರು ಡಿಸೆಂಬರ್ 2023ರಲ್ಲಿ ಸುಲ್ತಾನ್ ಅವರು ಭಾರತಕ್ಕೆ ಭೇಟಿ ನೀಡಿದ ಐಸಿಹಾಸಿಕ ಕ್ಷಣದ ಬಗ್ಗೆ ಪ್ರಸ್ತಾಪಿಸಿದರು ಹಾಗೂ ಈ ಭೇಟಿಯು ಉಭಯ ದೇಶಗಳ ನಡುವೆ ಎಲ್ಲಾ ಕ್ಷೇತ್ರಗಳಲ್ಲಿ ಸಹಕಾರವನ್ನು ಗಾಢವಾಗಿಸಲು ಕಾರಣವಾಯಿತು

ಎರಡೂ ದೇಶಗಳ ಪರಸ್ಪರ ಲಾಭಕ್ಕಾಗಿ ಭಾರತ ಹಾಗೂ ಓಮನ್ ದೇಶದ ಪಾಲುದಾರಿಕೆಯನ್ನು ಇನ್ನಷ್ಟು ಗಾಢವಾಗಿಸುವ ಮತ್ತು ಬಲಪಡಿಸುವ ತಮ್ಮ ಬದ್ಧತೆಯನ್ನು ಉಭಯ ದೇಶಗಳ ನಾಯಕರು ಪುನರುಚ್ಚಿಸಿದರು.

ಸದ್ಯದಲ್ಲಿಯೇ ಬರುವ ಇದ್ ಉಲ್ ಅಧಾ ಹಬ್ಬಕ್ಕಾಗಿ ಘನತೆವೆತ್ತ ಸುಲ್ತಾನ್ ಹಾಗೂ ಓಮನ್ ದೇಶದ ನಾಗರಿಕರಿಗೆ ಪ್ರಧಾನಿಯವರು ಶುಭಾಶಯಗಳನ್ನು ಕೋರಿದರು.

**ನವದೆಹಲಿ**

**ಜೂನ್ 11,2024**